**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 29 ಕೆಒಎಲ್ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ : 11-04-2000.

**ಸುತ್ತೋಲೆ**

ವಿಷಯ :- ಸರ್ಕಾರದ ಎಲ್ಲಾ ಇಲಾಖೆಗಳು ಆಡಳಿತದಲ್ಲಿ ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಬಳಸುವ ಬಗ್ಗೆ.

ಉಲ್ಲೇಖ : 1) ಕರ್ನಾಟಕ ರಾಜ್ಯ ಭಾಷಾ ಅಧಿನಿಯಮ 1963.

2) ಸುತ್ತೋಲೆ ಸಂಖ್ಯೆ : ಜಿಎಡಿ 31 ಪಿಎಲ್‌ಎಕ್ಸ್ 63, ದಿನಾಂಕ : 12-06-1963.

3) ಅಧಿಕೃತ ಜ್ಞಾಪನ ಸಂಖ್ಯೆ : ಜಿಎಡಿ 13 ಪಿಒಎಲ್ 70, ದಿನಾಂಕ 24-08-1970.

4) ಸುತ್ತೋಲೆ ಸಂಖ್ಯೆ : ಜಿಎಡಿ 58 ಪಿಒಎಲ್ 71, ದಿನಾಂಕ 08-12-1971.

5) ಅಧಿಕೃತ ಜ್ಞಾಪನ ಸಂಖ್ಯೆ : ಜಿಎಡಿ 39 ಎಂಎಆರ್ 72, ದಿನಾಂಕ 06-07-1972.

6) ಸುತ್ತೋಲೆ ಸಂಖ್ಯೆ : ಜಿಎಡಿ 22 ಪಿಒಎಲ್ 74, ದಿನಾಂಕ 28-06-1974.

7) ಆದೇಶ ಸಂಖ್ಯೆ : ಡಿಪಿಎಆರ್ 40 ಕೆಒಎಲ್ 84,

ದಿನಾಂಕ 16-07-1984.

8) ಆದೇಶ ಸಂಖ್ಯೆ : ಡಿಪಿಎಆರ್ 40 ಕೆಒಎಲ್ 85, ದಿನಾಂಕ 09-08-1985.

9) ಆದೇಶ ಸಂಖ್ಯೆ : ಡಿಪಿಎಆರ್ 80 ಕೆಒಎಲ್ 88, ದಿನಾಂಕ 21-05-1988.

10) ಆದೇಶ ಸಂಖ್ಯೆ : ಡಿಪಿಎಆರ್ 47 ಕೆಒಎಲ್ 88, ದಿನಾಂಕ 23-05-1988.

11) ಅಧಿಕೃತ ಜ್ಞಾಪನ ಸಂಖ್ಯೆ : ಡಿಪಿಎಆರ್ 186 ಕೆಒಎಲ್ 91, ದಿನಾಂಕ 25-11-1991 ಮತ್ತು 28:29-11-1991

12) ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 162 ಕೆಒಎಲ್ 93, ದಿನಾಂಕ 29-03-1993.

13) ಸರ್ಕಾರದ ಸುತ್ತೋಲೆ ಸಂಖ್ಯೆ ಸಂಕಇ 1 ಕೆಒಎಲ್ 97, ದಿನಾಂಕ 01-02-1997.

-------

ಕನ್ನಡವು ಕರ್ನಾಟಕ ರಾಜ್ಯದ ಆಡಳಿತ ಭಾಷೆಯಾಗಿ ಇರತಕ್ಕದ್ದೆಂದು ಉಲ್ಲೇಖ (1) ಕರ್ನಾಟಕ ರಾಜ್ಯ ಭಾಷಾ 1963ರಲ್ಲಿ ತಿಳಿಸಲಾಗಿದೆ.

ಶೇ. 15ಕ್ಕಿಂತ ಹೆಚ್ಚು ಭಾಷಾ ಅಲ್ಪಸಂಖ್ಯಾತರಿರುವಲ್ಲಿ ಅರ್ಜಿಗಳನ್ನು ಭಾಷಾ ಅಲ್ಪಸಂಖ್ಯಾತರ ಭಾಷೆಗಳಲ್ಲಿ ಸ್ವೀಕರಿಸಲು ಉಲ್ಲೇಖ (2) ರ ಸುತ್ತೋಲೆಯಲ್ಲಿ ಸೂಚಿಸಿದೆ.

ಕನ್ನಡದಲ್ಲಿ ಬರುವ ಅರ್ಜಿ ಮತ್ತು ಪತ್ರಗಳಿಗೆ ಕಡ್ಡಾಯವಾಗಿ ಕನ್ನಡದಲ್ಲಿಯೇ ಉತ್ತರಿಸಬೇಕೆಂದು ಉಲ್ಲೇಖಿತ (3) ರ ಅಧಿಕೃತ ಜ್ಞಾಪನದಲ್ಲಿ ನಿರ್ದೇಶಿಸಿದೆ.

ಸರ್ಕಾರಿ ಕಛೇರಿಗಳ ನಾಮಫಲಕಗಳನ್ನು ಕನ್ನಡದಲ್ಲಿ ಇರುವಂತೆ ನೋಡಿಕೊಳ್ಳಲು ಉಲ್ಲೇಖ (4) ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಗಮನ ಸೆಳೆಯುವ ಸೂಚನೆಗಳು ಮುಂತಾದವುಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಚಿವರುಗಳಿಗೆ ಸಲ್ಲಿಸಲು ಉಲ್ಲೇಖ (5)ರ ಅಧಿಕೃತ ಜ್ಞಾಪನದಲ್ಲಿ

ತಿಳಿಸಲಾಗಿದೆ. ನೇಮಕಾತಿ ವರ್ಗಾವಣೆ ಮತ್ತು ರಜೆ ಮಂಜೂರಾತಿ ಆದೇಶಗಳನ್ನು ಕನ್ನಡದಲ್ಲಿಯೇ ಹೊರಡಿಸಲು ಉಲ್ಲೇಖ (6)ರ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಸೂಚನೆಗಳನ್ನು ನೀಡಲಾಗಿದೆ.

ಕಛೇರಿಗಳಿಗೆ ಒದಗಿಸಿರುವ ಆಂಗ್ಲ ಭಾಷೆಯಲ್ಲಿನ ನಮೂನೆ / ದಾಖಲೆ ಪುಸ್ತಕ ಮುಂತಾದವುಗಳನ್ನು ಕನ್ನಡದಲ್ಲಿ ಭರ್ತಿ ಮಾಡುವಂತೆ, ಆಂತರಿಕ ಕಛೇರಿ ಪತ್ರ ವ್ಯವಹಾರ ಕನ್ನಡದಲ್ಲಿಯೇ ಇರಬೇಕೆಂದು, ಕನ್ನಡದಲ್ಲಿ ಟಿಪ್ಪಣಿ ಮಾಡಿದ ಕಡತದಲ್ಲಿ ಮೇಲಿನ ಅಧಿಕಾರಿಗಳು ಆಂಗ್ಲ ಭಾಷೆಯಲ್ಲಿ ಟಿಪ್ಪಣಿ ಮಾಡುವ ದ: ತೆ, ಮುಂತಾದವುಗಳನ್ನು ಅನುಸರಿಸಲು ಮತ್ತು ವೈಯಕ್ತಿಕವಾಗಿ ಜವಾಬ್ದಾರರನ್ನಾಗಿ ಮಾಡಿ, ಸರ್ಕಾರಿ ಆದೇಶಗಳ ಉಲ್ಲಂಘನೆಗೆ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಉಲ್ಲೇಖ (7)ರಲ್ಲಿನ ಆದೇಶದಲ್ಲಿ ಆದೇಶಿಸಲಾಗಿದೆ.

ಆಡಳಿತ ಕನ್ನಡ ಭಾಷಾ ತರಬೇತಿ ಕಾರ್ಯ ಶಿಬಿರಗಳಿಗೆ ಆಯ್ಕೆಯಾದ ಅಧಿಕಾರಿ / ನೌಕರರು ತಪ್ಪದೇ ತರಬೇತಿಯಲ್ಲಿ ಭಾಗವಹಿಸಬೇಕೆಂದು, ತಪ್ಪಿದಲ್ಲಿ ಸಂಬಂಧಿಸಿದ ಇಲಾಖೆ / ಕಛೇರಿ ಅಧಿಕಾರಿಗಳನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡಿ, ಈ ಬಗ್ಗೆ ಉದಾಸೀನ ತೋರಿದವರ ವಿರುದ್ಧ ಸರ್ಕಾರಿ ಆದೇಶಗಳ ಉಲ್ಲಂಘನೆಗಾಗಿ, ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ಉಲ್ಲೇಖ (8)ರ ಆದೇಶದಲ್ಲಿ ಸ್ಪಷ್ಟ ಪಡಿಸಲಾಗಿದೆ.

ಸಭೆಯ ಸೂಚನೆ, ಸಭೆಯ ಕಾರ್ಯಸೂಚಿ ಮತ್ತು ಸಭೆಯ ಸಂಕ್ಷಿಪ್ತ ಟಿಪ್ಪಣಿ ಅಥವಾ ನಡವಳಿಗಳನ್ನು ಕನ್ನಡದಲ್ಲೇ ತಯಾರಿಸಿ ಸರ್ಕಾರದ ಭಾಷಾ ನೀತಿಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವಂತೆ ಉಲ್ಲೇಖ (9)ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೇಂದ್ರ ಸರ್ಕಾರ, ಹೊರ ರಾಜ್ಯ ಕಛೇರಿಗಳು ಮತ್ತು ನ್ಯಾಯಾಲಯಗಳೊಡನೆ ನಡೆಸುವ ಪತ್ರ ವ್ಯವಹಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ಪತ್ರ ವ್ಯವಹಾರಗಳು ಕನ್ನಡದಲ್ಲಿಯೇ ಇರುವಂತೆ ಗಮನ ಹರಿಸಲು ಉಲ್ಲೇಖ (10)ರ ಅಧಿಕೃತ ಜ್ಞಾಪನದಲ್ಲಿ ಸೂಚಿಸಲಾಗಿದೆ.

ಸರ್ಕಾರಿ ಪತ್ರ ವ್ಯವಹಾರ ಮತ್ತು ಕಡತಗಳಲ್ಲಿನ ಟಿಪ್ಪಣಿಗಳನ್ನು ಕನ್ನಡದಲ್ಲಿಯೇ ಮಾಡುವಂತೆ ಸೂಚಿಸಿದ್ದರೂ ಸಹ ಕನ್ನಡವನ್ನು ಪರಿಣಾಮಕಾರಿಯಾಗಿ

ಅನುಷ್ಠಾನಗೊಳಿಸದಿರುವುದನ್ನು ಗಮನಿಸಿದ ಮಾನ್ಯ ಮುಖ್ಯಮಂತ್ರಿಗಳು, ಕಡತದಲ್ಲಿ ಟಿಪ್ಪಣಿಗಳು ಮತ್ತು ಪತ್ರ ವ್ಯವಹಾರಗಳು ಕನ್ನಡದಲ್ಲಿರದಿದ್ದರೆ ಅಂತಹ ಕಡತಗಳನ್ನು ಹಿಂದಿರುಗಿಸಿ, ಕಛೇರಿ ಮುಖ್ಯಸ್ಥರು ಸಂಬಂಧಪಟ್ಟ ಅಧಿಕಾರಿಗಳು/ ನೌಕರರಿಂದ ಸಮಜಾಯಿಷಿ ಪಡೆಯತಕ್ಕದ್ದೆಂದು ನೀಡಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಉಲ್ಲೇಖ (11)ರ ಅಧಿಕೃತ ಜ್ಞಾಪನದಲ್ಲಿ ಆದೇಶಿಸಿದೆ. ಸರ್ಕಾರದಿಂದ ರಚಿತವಾದ ಮಂಡಳಿಗಳು, ಪ್ರಾಧಿಕಾರಗಳು, ಸ್ಥಳೀಯ ಸಂಸ್ಥೆಗಳು, ನಿಗಮಗಳು, ವಿಶ್ವವಿದ್ಯಾಲಯಗಳು ಮತ್ತು ಸರ್ಕಾದ ಅನುದಾನ ಅಥವಾ ಆರ್ಥಿಕ ನೆರವು ಪಡೆಯುತ್ತಿರುವ ಇತರ ಎಲ್ಲಾ ಸಂಘ ಸಂಸ್ಥೆಗಳ ಮುಖ್ಯಸ್ಥರೂ ಸಹ ಕನ್ನಡದ ಸಮಗ್ರ ಬಳಕೆಯ ಬಗ್ಗೆ ಉಲ್ಲೇಖ (12)ರಲ್ಲಿನ ಅಧಿಕೃತ ಜ್ಞಾಪನ ಮತ್ತು ಉಲ್ಲೇಖ (13)ರ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಲಾಗಿದೆ.

ಆಡಳಿತದಲ್ಲಿ ಕನ್ನಡವನ್ನು ಪೂರ್ಣ ಪ್ರಮಾಣದಲ್ಲಿ ಬಳಸುವ ಸಂಬಂಧವಾಗಿ ಕೆಲವು ಸರ್ಕಾರಿ ಕಛೇರಿಗಳು ಮೇಲೆ ತಿಳಿಸಿರುವ ಆದೇಶಗಳಲ್ಲಿನ ಸೂಚನೆಗಳನ್ನು ಸಮರ್ಪಕವಾಗಿ ಪಾಲಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದ ಭಾಷಾ ನೀತಿಯನ್ನು ಪೂರ್ಣ ಪ್ರಮಾಣದಲ್ಲಿ ಹಾಗು ಎಲ್ಲಾ ಹಂತಗಳಲ್ಲಿ ಜಾರಿಗೊಳಿಸುವುದು ಎಲ್ಲಾ ಅಧಿಕಾರಿಗಳ / ನೌಕರರ ಕರ್ತವ್ಯವಾಗಿದೆ. ಆದುದರಿಂದ ಮೇಲಿನ ಉಲ್ಲೇಖಗಳಲ್ಲಿನ ಸರ್ಕಾರದ ಆದೇಶಗಳಲ್ಲಿ ನೀಡಿರುವ ಸೂಚನೆಗಳನ್ನು ರಾಜ್ಯ ಸರ್ಕಾರದ ಎಲ್ಲಾ ಅಧಿಕಾರಿಗಳು / ನೌಕರರು ಮತ್ತು ರಾಜ್ಯ ಸರ್ಕಾರದಿಂದ ರಚಿತವಾದ ಪ್ರಾಧಿಕಾರಗಳು, ನಿಗಮ, ಮಂಡಳಿ, ಸ್ಥಳೀಯ ಸಂಸ್ಥೆಗಳು, ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಸರ್ಕಾರಿ ಉದ್ದಿಮೆಗಳು ಮತ್ತು ಸರ್ಕಾರದ ಅನುದಾನ ಅಥವಾ ಆರ್ಥಿಕ ನೆರವು ಪಡೆಯುತ್ತಿರುವ ಎಲ್ಲಾ ಸಂಘ-ಸಂಸ್ಥೆಗಳು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕೆಂದು ಪುನರುಚ್ಚರಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಉಲ್ಲಂಘಿಸಿದವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

**(ಬಿ.ಕೆ. ಭಟ್ಟಾಚಾರ್ಯ)**

ಸರ್ಕಾರದ ಮುಖ್ಯ ಕಾರ್ಯದರ್ಶಿ

೯೨

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು,

(ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಗಾಗಿ)

ಪ್ರತಿ :

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
2) ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು
3) ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಮತ್ತು ವಸತಿ ಇಲಾಖೆ.
4) ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ.
5) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
6) ಮುಖ್ಯ ಮಂತ್ರಿಗಳ ಕಾರ್ಯದರ್ಶಿಗಳು
7) ಎಲ್ಲಾ ವಿಭಾಗಾಧಿಕಾರಿಗಳು
8) ಎಲ್ಲಾ ಇಲಾಖಾ ಮುಖ್ಯಸ್ಥರುಗಳು
9) ಎಲ್ಲಾ ಜಿಲ್ಲಾಧಿಕಾರಿಗಳು
10) ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಕಾರಿಗಳು
11) ಸರ್ಕಾರದ ಎಲ್ಲಾ ಹೆಚ್ಚುವರಿ / ಜಂಟಿ / ಉಪ / ಅಧೀನ ಕಾರ್ಯದರ್ಶಿಗಳು
12) ಎಲ್ಲಾ ವಿಶ್ವವಿದ್ಯಾಲಯಗಳ ಉಪಕುಲಸಚಿವರು
13) ರಾಜ್ಯದ ಎಲ್ಲಾ ಪುರ / ನಗರ ಸಭೆಗಳ ಮುಖ್ಯಾಧಿಕಾರಿಗಳು / ಆಡಳಿತಾಧಿಕಾರಿಗಳು
14) ರಾಜ್ಯದ ಎಲ್ಲಾ ನಿಗಮಗಳ ಮುಖ್ಯ ವ್ಯವಸ್ಥಾಪಕರುಗಳು / ವ್ಯವಸ್ಥಾಪಕ ನಿರ್ದೇಶಕರು

15) ರಾಜ್ಯದ ಎಲ್ಲಾ ಮಂಡಳಿಗಳ ಕಾರ್ಯದರ್ಶಿಗಳು / ವ್ಯವಸ್ಥಾಪಕ ನಿರ್ದೇಶಕರು

16) ಎಲ್ಲಾ ಸಚಿವರ ಮತ್ತು ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು

17) ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು

18) ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ವ್ಯವಹಾರಗಳ ಇಲಾಖೆ

19) ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖಾಧಿಕಾರಿಗಳು

20) ಶಾ.ರ.ಕ.